Regd No B G. 155

Sn

8—10—1957

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

# ಸತ್ಯವಾದಿ

ಸಂಸ್ಥಾಪಕರು— ಅಂಬಳೆ ಸಿಂಸ್ಕೆದಾರ್ ಎಂ ವಿ ಸುಬ್ಬರಾಯರು [ 2 ನಯೆ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೩೦ ನಯೆ ಪೈ

**Protect the Cow**

**ಗೋಸಂರಕ್ಷಣೆ ಮಾಡಿ**

## ವಾರ್ತಾ ವಿಶೇಷಗಳು

★

ತಂಜಾವೂರು— ಅಕ್ಕಿಗಾಗಿ ಜನರು ಗಂಟೆಗಟ್ಟಲೆ ಅಂಗಡಿಗಳ ಮುಂದೆ ನಿಲ್ಲುತ್ತಿದ್ದಾರೆಂದು ವರದಿಯಾಗಿದೆ

★

ನವದೆಹಲಿ— ಪೆಟ್ರೋಲು ಪದಾರ್ಥಗಳ ಮೇಲೆ ಸುಂಕ ಹೆಚ್ಚಿಸಲಾಗಿದೆ.

★

ಮಧುರೈ— ಚಿನ್ನದ ಅಕ್ಕನವರ ಸಾಗಾಣಿಕೆ ಹೆಚ್ಚಿಬೇಕೆಂದು ಭಾರತದ ಮಾಜಿ ಅರ್ಥಮಂತ್ರಿ ಮೊರಾರ್ಜಿ ದೇಸಾಯರು ಹೇಳಿದರು

★

ಪಾಟ್ನಾ— ಆದಾಯ ತೆರಿಗೆ ಅಧಿಕಾರಿಗಳು ಕೆಲ ವ್ಯಾಪಾರ ಸಂಸ್ಥೆಗಳ ಮೇಲೆ ಧಾಳಿ ನಡೆಸಿ ಕಾಗದ ಪತ್ರಗಳನ್ನೂ ಹಣವನ್ನೂ ವಶಪಡಿಸಿಕೊಂಡರು

★

ಅನಂತಪುರಂ— ಈಚಿನ ಮಳೆಯ ಹಾವಳಿಯಿಂದ 1000 ಎಕ್ರೆ ಮೇಲ್ಪಟ್ಟು ಬೆಳೆ ನಾಶವಾಗಿದೆ

★

ಬೆಂಗಳೂರು— ಬೆಂಗಳೂರು ಪೌರ ಸಮಿತಿ ಎಂದೂ ನಾವಾಂಕಿತವಾದ ಸಂಯುಕ್ತ ವಿರೋಧ ಪಕ್ಷಗಳ ರಂಗವು ಬರುವ ಕಾರ್ಪೊರೇಷನ್ ಚುನಾವಣೆಯಲ್ಲಿ ಎಲ್ಲ 63 ಸ್ಥಾನಗಳಿಗೂ ಸ್ಪರ್ಧಿಸುವುದು

★

ಬಟ್ಟಂಡು— ಚೀನವು ನೇಪಾಳದಲ್ಲಿ ತನ್ನಾ ನೀರಾವರಿ ಯೋಜನೆಯ ನಾಲೆಯನ್ನು ನಿರ್ಮಿಸಲು ಒಪ್ಪಂದವಾಗಿದೆ

★

## ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನ ಮಹಾವಿದ್ವಾನ್. ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಪುರಶ್ಚರ್ಯಾಷ್ಟ ಜೋಯಿಸರಂದ

ಶುಕ್ರವಾರ ಬೌತ ವಿಶಾಖ

## ತಳ್ಳಿಹಾಕಿದರು

ಚಂಡೀಘಢ— ಮಾಜಿ ಮುಖ್ಯ ಮಂತ್ರಿ ಶ್ರೀ ಕೈರಾನರನ್ನು ಶಾಸನಸಭೆಯಿಂದ ಹೊರದೂಡಬೇಕೆಂಬ ಸೂಚನೆಯನ್ನು ಸ್ವೀಕರಿಸಿ ತಳ್ಳಿಹಾಕಿದರು — ಕೈರಾನರ ಮನೆಯನ್ನು ಶೋಧಿಸಲಾಯಿತೆಂದೂ, ಏನೂ ಕಂಡುಬರಲಿಲ್ಲವೆಂದೂ ಶಾಸನಸಭೆಯಲ್ಲಿ ಮುಖ್ಯ ಮಂತ್ರಿಯವರು ಹೇಳಿದರು — ಶ್ರೀ ಪಂಜೇರ ಸಿಂಗರೆಂಬ ಕಮ್ಯೂನಿಸ್ಟು ಸದಸ್ಯರು, ಕೈರಾನರು ತಮ್ಮ ಮನೆಯಲ್ಲಿ ರೂ. 3 ಕೋಟಿ ಬೆಲೆಯ ಅಕ್ರಮ ಸಾಗಾಣಿಕೆ ಚಿನ್ನವನ್ನು ಹೂತಿಟ್ಟಿರಬಹುದೆಂದೂ, ಅವರ ಹೆಂಡತಿ ಮತ್ತು ಡ್ರೈವರರಿಗೆ ಈ ವಿಷಯ ಗೊತ್ತಿರುವುದೆಂದೂ, ಡ್ರೈವರನ್ನು ಬಂಧಿಸಿ ಪ್ರಶ್ನಿಸಬೇಕೆಂದೂ ಹೇಳಿದರು.

## ನಾಲ್ಕನೇ ಯೋಜನೆ

ನವದೆಹಲಿ— ನಾಲ್ಕನೇ ಯೋಜನೆಗೆ ರೂ 21500 ಕೋಟಿಗಳನ್ನು ಕಮಿಷನ್ ಯೋಜಿಸಿದೆ.

## ಅಣಕ ಸ್ಕೋಟ

ಟೋಕಿಯೊ— ಯಾವ ಸಮುದ್ರದಲ್ಲಿ ಬೇಕಾದರೂ ಚೀನಾ ನೂಕ್ಲಿಯರು ಬಾಂಬನ್ನು ಸ್ಫೋಟನ ಮಾಡಬಹುದೆಂದು ರಷ್ಯಾ ಪ್ರಧಾನಿ ಕೃಶ್ಚೇವರು ಹೇಳಿದರು.

★

ಕೈರೊ— ಯುಗೊಸ್ಲೊವಿಯಾದ ಅಧ್ಯಕ್ಷ ಟೀಟೋರವರು, ವರ್ಣವಿಭೇದ ನೀತಿಯ ದಕ್ಷಿಣ ಆಫ್ರಿಕಾ ಮೇಲೆ ಆರ್ಥಿಕ ಬಹಿಷ್ಕಾರ ಹಾಕಬೇಕೆಂದು ತಟಸ್ಥ ಸಮ್ಮೇಳನದಲ್ಲಿ ತಿಳಿಸಿದರು.

★

ನ್ಯೂಯಾರ್ಕ್— ಟಿಬೆಟ್ಟಿನ ಕಡೆಯ ಸಿಕ್ಕಿಂ ಗಡಿ ಬಲವಾಗಿ ಕಾಯಬೇಕಾಗಿದೆ ಎಂದು ಸಿಕ್ಕಿಂ ಮಹಾರಾಜರು ಹೇಳಿದರು

## ನೆಹರೂರಿಗೆ ಶ್ರದ್ಧಾಂಜಲಿ

ಕೈರೊ— ನೆಹರೂರವರ ಬಗ್ಗೆ ಅತ್ಯಂತ ವಿಶ್ವಾಸ ಮತ್ತು ಅವರು ಇಲ್ಲದಿರುವ ಬಗ್ಗೆ ಸಂತಾಪ ಸೂಚಿಸಲು ಸಂಯುಕ್ತ ಅರಬ್ ಪ್ರಜಾರಾಜ್ಯ ಸರಕಾರವು ಇಲ್ಲಿನ ಎಲ್ಲ ಪತ್ರಿಕೆಗಳಲ್ಲೂ ಸ್ಥಳ ಕೊಂಡುಕೊಂಡು, 'ಅಮರ ನಾಯಕ ನೆಹರೂರಿಗೆ ಶ್ರದ್ಧಾಂಜಲಿ' ಎಂಬ ಶಿರೋನಾಮದಲ್ಲಿ ಜಾಹಿರಾತುಗಳನ್ನು ಪ್ರಕಟಿಸಿದೆ.

## ಕೇಂದ್ರ ಸೂಚಿಸಿದೆ

ಬೆಂಗಳೂರು— ಹಾಸನ-ಮಂಗಳೂರು ರೈಲ್ವೆ ಹಾಳಾದ ಕಾರ್ಯವನ್ನು ಕೂಡಲೇ ಕೈಗೊಳ್ಳುವಂತೆ ದಕ್ಷಿಣ ರೈಲ್ವೆ ಜನರಲ್ ಮ್ಯಾನೇಜರಿಗೆ ಭಾರತ ರೈಲ್ವೇ ಸಚಿವಾಲಯವು ಸೂಚನೆ ಇತ್ತಿದೆ

.....

## ಇಪ್ಪತ್ತು ಸಾವು

ಬೆಂಗಳೂರು— ಬಿಜಾಪುರ ಜಿಲ್ಲೆಯಲ್ಲಿ ಸೆಪ್ಟಂಬರು 29 ರಿಂದ ಅಕ್ಟೋಬರು 3 ರವರೆಗಾದ ಭೀಕರ ಮಳೆ ಹಾವಳಿಯಿಂದ ಸ್ಕೂಲು ಕಟ್ಟಡ ಮನೆಗಳು ಕುಸಿದು 20 ಮಂದಿ ಸತ್ತಿರುವರೆಂದು ವರದಿಯಾಗಿದೆ — ಶ್ರೀ ಕಂಠಿ ಮಂತ್ರಿಗಳು ಎಲ್ಲವನ್ನು ಪರಿಶೀಲಿಸಲೂ ಮತ್ತು ಪರಿಹಾರವನ್ನೇರ್ಪಡಿಸಲೂ ಅಲ್ಲಿಗೆ ಹೋಗಿರುತ್ತಾರೆ.

—

ನವದೆಹಲಿ— 63-64 ನೇ ಸಾಲಿಗೆ ಅಶೋಕ ಹೋಟಲಿಗೆ ರೂ 3000767 ನಿವ್ವಳ ನಷ್ಟ ತೊರೆತಿದೆ

ಕೈರೋ— ತಟಸ್ಥ ದೇಶಗಳ ಎರಡನೇ ಸಮ್ಮೇಳನವು ಮೊನ್ನೇ ಪ್ರಾರಂಭವಾಯಿತು : ಅಧ್ಯಕ್ಷ ನಾಸರೇಯುವರು ನೆಹ್ರೂ ಬಗ್ಗೆ ಗುಣಗಾನ ಮಾಡಿದರು.

## ಸವಾಲಿನಂತಿದೆ

ಕರಾಚಿ— ಸಂಯುಕ್ತ ವಿರೋಧಿಗಳ ಪಂಘಾತಿಮಾ ಜೆನ್ನಾರು ಅಧ್ಯಕ್ಷತೆಗೆ ಸ್ಪರ್ಧಿಸುವಂತೆ ಜಮಾತ್ ಇ ಇಸ್ಲಾಮಿ ಪಕ್ಷ ಇತ್ತಿರುವ ಘಾತ್ವಾವು ಉಲೆಮಾಗಳಿಗೆ ಸವಾಲು ಹಾಕಿದಂತಾಗಿದೆಯೆಂದು ಅಡಳಿತ ಪಕ್ಷ ಮುಸ್ಲಿಂಲೀಗಿನ ಕಾರ್ಯದರ್ಶಿ ಅಬ್ದುಲ್ ವಹೀದಖಾನರು ಹೇಳಿದರು.

—

ನವದೆಹಲಿ— ಶನಿವಾರ ಬೆಳಿಗ್ಗೆ ಕಾಶ್ಮೀರ ಕಣಿವೆಯ ಗುರೇಸುಸಕ್ಟರಿನಲ್ಲಿ ಪಾಕಿಸ್ತಾನ ಮತ್ತು ಭಾರತ ಸೇವಾಯಿಗಳಲ್ಲಾದ ಘರ್ಷಣೆಯಲ್ಲಿ ಐದು ಮಂದಿ ಪಾಕಿಸ್ತಾನಿ ಸಿಪಾಯಿಗಳು ಹತರಾದರು

ಡೋವರು— ರಾಕ್ಷಸಾಕಾರದ ಗಾಳಿಪಟವನ್ನು ಹಾರಿಸಿ ಅದನ್ನು ಹಿಡಿದ ಕೊಂಡು ಒಬ್ಬ ಫ್ರೆಂಚಿವನು ಇಂಗ್ಲಿಷು ಕಡಲ್ಗಾಲುವೆಯನ್ನು ಹಾರಿ ದಾಟಿದನು.

ಬೊಂಬಾಯಿ— ಭಾರತದ 9 ಪ್ರಾಜೆಕ್ಟುಗಳಿಗೆ ಅಂತರರಾಷ್ಟ್ರೀಯ ಅಭಿವೃದ್ಧಿ ಬ್ಯಾಂಕಿನ ನೆರವು ಅಪೇಕ್ಷಿಸುತ್ತಿದೆ ಎಂದು ಕಾರ್ಯದರ್ಶಿ ಡೈರೆಕ್ಟರು ಹೇಳಿರುವರು.

.....

## ಮೊಸಳೆಯ ಶೇಪ್ಪು

ಶಿವಮೊಗ್ಗ— ಕರ್ಕಬಲು ಗ್ರಾಮದ ರಾಮಪ್ಪನೆಂಬುವನು ತನ್ನ ಗದ್ದೆಯಲ್ಲಿ ಬೆಳೆಯನ್ನು ಹಂದಿಗಳು ತಿನ್ನದಿರಲು ಅಲ್ಲಿ ಒಂದು ಪುದ್ದುಗುಂಡು ತುಂಬಿದ ಬಂದೂಕ ಇಟ್ಟಿದ್ದನು : ಕಳೆದ ವರ್ಷ ಅಕಸ್ಮಾತ್ತಾಗಿ ಗುಂಡುಹಾರಿ ದಾರಿಯಲ್ಲಿ ಹೋಗುತ್ತಿದ್ದವನೊಬ್ಬನಿಗೆ ತಗುಲಿ ಅವನು ಸತ್ತನು : ಪೋಲೀಸರು ರಾಮಪ್ಪನ ಮೇಲೆ ಹೂಡಿದ್ದ ವೊಕದ್ದಮೆಯಲ್ಲಿ ತೀರ್ಥಹಳ್ಳಿ ಸ್ಪೆಷಲ್ ಫಸ್ಟ್ ಕ್ಲಾಸು ಮ್ಯಾಜಿಸ್ಟ್ರೇಟರು ಮೊನ್ನೆ ತೀರ್ಪಿತ್ತು ಅವನಿಗೆ 3 ತಿಂಗಳು ಸಜೆ ಮತ್ತು ರೂ 500 ಜುಲ್ಮಾನೆ ವಿಧಿಸಿದರು.

### ದಸರಾ ಮನೋರಂಜನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ತಾ || 9 ರಂದು ಟೌನ್‌ಹಾಲಿನಲ್ಲಿ 9 ರಿಂದ 12 ಮತ್ತು 3 ರಿಂದ 7 ರವರೆಗೂ, ಎಗ್ಸಿಬಿಷನ್ನಿನಲ್ಲಿ 5-30 ರಿಂದ 9 ರವರೆಗೂ, ಸಂಗೀತ, ತಬಳ, ಗಮಕ ಭಾವಗೀತೆ, ಅರ್ಕೆಸ್ಟ್ರಾ, ನಾಗಸ್ವರ, ನೃತ್ಯ ಏರ್ಪಡಿಸಲಾಗಿದೆ.

## ಶಾಸ್ತ್ರಗಳನ್ನು ಟೀಕಿಸುವುದು ಸರಿಯೇ ?

( ಮುಂದುವರಿದದ್ದು )

ಈಗ ಶಾಸ್ತ್ರಗಳನ್ನು ಟೀಕೆ ಮಾಡುವವರ ಅಧಿಕಾರವಾದರೂ ಏನು ? ಅವರ ಮೊದಲನೆಯ ಅರ್ಹತೆಯೆಂದರೆ ಶಾಸ್ತ್ರಗಳೂ ಹಾಗೂ ಸಂಸ್ಕೃತ ಭಾಷೆಯ ಅಜ್ಞತೆ ; ಅವರಿಗೆ ಎಷ್ಟು ಹೆಚ್ಚಾದ ಅಜ್ಞತೆ ಇರುತ್ತದೋ, ಅಷ್ಟು ಅಧಿಕಾರಯುಕ್ತವಾಗಿ ಮಾತನಾಡುತ್ತಾರೆ ; ಅಂದರೆ ಈಗಿನ ಕಾಲದಲ್ಲಿ ಅಜ್ಞತೆಯೇ ಜ್ಞಾನದ ತಂದೆ, ಬುದ್ಧಿಶಕ್ತಿಯೆ ಅಜ್ಞತೆಯು ತಂದೆಯೆಂಬ ಹಾಗಾಗಿರುತ್ತ ; ಅವರ ಮುಂದಿನ ಅಧಿಕಾರವೆಂದರೆ ದುರಹಂಕಾರ, ಫ್ಯಾಷನ್ನಿನ ಗುಲಾಮಗಿರಿ ; ಸಂಪೂರ್ಣವಾದ ಅಜ್ಞತೆಯಿಂದ ಕೂಡಿದ, ಫ್ಯಾಷನ್ನಿಗೆ ಕಾರಣವಿಲ್ಲದೇ ದಾಸರಾಗುವ, ಸತ್ಯವಿಚಾರದಲ್ಲಿ ಜರ್ಜರಿ ಮಾಡಲು ಬಯಸುವ ದುರಹಂಕಾರ : ಅವರ ಮೂರನೆಯ ಅಧಿಕಾರವೆಂದರೆ ಶಾಸ್ತ್ರದಲ್ಲಿ ಸೂಚಿಸಲ್ಪಟ್ಟ ಅಧಿಕಾರದ ವಿಷಯದಲ್ಲಿ ಸಂಪೂರ್ಣ ಅಜ್ಞತೆ, ಯಾವ ವಿಧವಾದ ಜ್ಞಾನವೂ ಇಲ್ಲದೇ, ಟೀಕೆ ಮಾಡಲು ತಮಗೆ ಯಾವ ವಿಧವಾದ ಯೋಗ್ಯತೆ ಇಲ್ಲದಿದ್ದರೂ, ಆ ವಿಚಾರದಲ್ಲಿ ಮಾತನಾಡುವುದು ; ಈಗ ಇವುಗಳಿಗೆ ಶಾಸ್ತ್ರದ ವಿಚಾರದಲ್ಲಿ ಟೀಕೆ ಮಾಡಲು ಇವರಿಗೆ ಇರುವ ಅಯೋಗ್ಯತೆಯಲ್ಲಿ ಯಾರಿಗಾದರೂ ಸಂಶಯ ಬರುವುದೇ ?

ಶಾಸ್ತ್ರಗಳು ಶ್ರೀ ಹರಿಯ ಕೃಪೆಯಿಂದಲ್ಲದೇ ತಿಳಿಯಲು ಸಾಧ್ಯನೇ ಇಲ್ಲವೆಂದು ನಿಶ್ಚಂಕೆಯಿಂದ ಸಾರುತ್ತಿವೆ : ' ಒಬ್ಬ ಮನುಷ್ಯನು ಸಮಸ್ತ ಶಾಸ್ತ್ರಗಳನ್ನೆಲ್ಲ ಓದಿದ್ದರೂ ಕೂಡ, ಅಹಂಕಾರಯುಕ್ತನಾಗಿದ್ದರೆ ದೇವರನ್ನು ಕಾಣಲು ಸಾಧ್ಯವಿಲ್ಲ : ಕೇಗೆಂದರೆ, ಸಕ್ಕರೆ ಪಾಕದಲ್ಲಿ ಮುಳುಗಿಸಿದ್ದರೂ ಕೂಡ ಜೊಂಬೆಯು ಅವಗುಣವನ್ನು ಅನ್ವಾದಿಸಲಾರದು'. ಅಹಂಕಾರವೆಂದ್ದು ಶರಣಾಗತಿ ಮಾಡದೇ ಇರುವವನಿಗೆ ಎಷ್ಟೇ ಪ್ರಯತ್ನ ಮಾಡಿದರೂ ಶಾಸ್ತ್ರಗಳನ್ನು ತಿಳಿಯಲು ಸಾಧ್ಯವಿಲ್ಲ : ಶರಣಾಗತಿಯೇ ಬುದ್ಧಿಯನ್ನು ಸ್ವಚ್ಛಗೊಳಿಸಿ ಸತ್ಯವು ಪ್ರಕಾಶಿಸುವಂತೆ ಮಾಡತ್ತದೆ : ' ಸೂರ್ಯನು ಮೋಡಗಳನ್ನುಂಟುಮಾಡುತ್ತಾನೆ : ಆ ಮೋಡಗಳೇ ಅವನನ್ನು ಮುಚ್ಚುತ್ತವೆ ; ಗಾಳಿಯು ಯಾವಾಗ ಮೋಡಗಳನ್ನು ಚದುರಿಸುತ್ತದೋ ಆಗ ಸೂರ್ಯನು ಪ್ರಕಾಶಿಸುತ್ತಾನೆ : ಅದೇ ರೀತಿ ಅತ್ಮಕ್ಕೆ ಅಹಂಕಾರದಿಂದ ಸ್ವಸ್ವರೂಪವನ್ನು ಮರೆಸುತ್ತದೆ ; ಸತ್ಯವನ್ನು ತಿಳಿಯಲು ಶ್ರದ್ಧೆಯುಂಟಾದಲ್ಲಿ ಅಹಂಕಾರವು ದೂರ ಸರಿದು ಸೃಷ್ಟಿಕರ್ತನನ್ನು ತಿಳಿಯಬಹುದು ',

[ ಮುಂದುವರಿಯುವುದು ]

Interpretation of Shastras ಎಂಬ ಗ್ರಂಥದಿಂದ ಸಂಗ್ರಹಿಸಲಾಗಿದೆ

ಆ. ನ. ಅಯ್ಯಂಗಾರ್, ಹೊಂಗನೂರು.



ಗೋರಕ್ಷಣೆ ಪ್ರಾಣಿಮಾತ್ರ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ


**ವುಡ್‌ಲಾಂಡ್** ತೇಜಸ್ವಿ 4 ನೇ ವಾರ

ಶಿ ಸು —

.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

**ಪೂಜಾ ಕೆ ಫೂಲ್**

ತಾರಾಗಣ– ಅಶೋಕಕುಮಾರ್, ಮಾಲಾ ಸಿನ್ಹ, ನಿಮ್ಮಿ, ಧರ್ಮೇಂದ್ರ, ಪ್ರಾಣ್

[ ದಿನವಹಿ 3 ಪ್ರದರ್ಶನಗಳು ]

**ಆಪೆರಾ** ಜನಪ್ರಿಯ 3 ನೇ ವಾರ

ಅತ್ಯಮೋಘ ಕನ್ನಡ ಚಿತ್ರ [ ದಿನ 3 ಆಟಗಳು ]

**ಪೋಸ್ಟ್ ಮಾಸ್ಟರ್**

ಪಾತ್ರ– ಮಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

**ರಣಜಿತ್‌ನಲ್ಲಿ** 2–10–64 ರಿಂದ

ಆನೋಘ ಪ್ರಾರಂಭ

– ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ –

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ

**ಮುರಿಯದ ಮನೆ** [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು
ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ರದ್ದು ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

**SHAKTI SUDHA**

**Superb Tonic**

**Help The ' Gorakshana'**

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು



Edited, Printed & Published by the Proprietor
Dharma Prachara Nirata M. S. Krishna Rao at the
Satyavadi Press, Chamarajapuram, Mysore 4